ದಣಿವೆಲ್ಲ ಈ ಕಾಲದಲ್ಲಿ ಕಡಿಮೆಯಾಗಿದೆ. ನಿನ್ನೆ ನಾನು ಮತ್ತು ನನ್ನ ಸ್ನೇಹಿತ ಮಾತಿಗೆ ಕುಳಿತಾಗ, ನಾನು ಮತ್ತು ನೀವು ಮೊದಲ ಬಾರಿ ಸಂಧಿಸಿದ ಪ್ರಸಂಗವನ್ನು ಸ್ಮರಿಸಿಕೊಂಡೆವು. ಎಲ್ಲೋ ಇದ್ದ ನೀವು, ಎಲ್ಲೋ ಇದ್ದ ನಾನು ಪರಿಚಿತರಾಗಿ, ಒಂದೆಡೆ ಸೇರಿ ಪರಸ್ಪರ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳುವ ಪರಿ, ನಮಗೇ ಅರಿವಿಲ್ಲದಂತೆ ಹೀಗೆ ಸಂಬಂಧಗಳು ಸೃಷ್ಟಿಯಾಗುವ ವಿಸ್ಮಯಕ್ಕೆ ಬೆರಗುಗೊಂಡೆವು. ನಿಮ್ಮ ನೆನಪು ನನ್ನನ್ನು ಆಗಾಗ ಕಾಡುತ್ತಿರುತ್ತದೆ. ಎಂದಾದರೂ ಮತ್ತೆ ನಿಮ್ಮನ್ನು ಭೇಟಿ ಮಾಡಬೇಕು, ನೋಡಬೇಕು ಮಾತನಾಡಿಸಬೇಕು ಅನಿಸುತ್ತದೆ. ಆದರೆ, ಈಗ ನಾನು ಆ ಅರ್ಹತೆಯನ್ನು ಕಳೆದುಕೊಂಡಿದ್ದೇನೆ. 'ಆಸೆಯೇ ದುಃಖಕ್ಕೆ ಮೂಲ' ಎಂಬ ಬುದ್ಧನ ಮಾತು ಈ ಸಂದರ್ಭಕ್ಕೆ ಸರಿಯಾಗಿ ಅನ್ವಯವಾಗುತ್ತದೆ. ಇರಲಿ. ಇದಕ್ಕೆ ನೀವು ಹಾಕಿಕೊಂಡಿರುವ ಪರಿಮಿತಿಯೂ ಕಾರಣವಾಗಿರಬಹುದು. ಆದರೆ ಒಂದು ಮಾತನ್ನು ಹೇಳಲು ಬಯಸುತ್ತೇನೆ. ನನ್ನ ಕುರಿತು ನೀವು ಊಹಿಸಿರುವಷ್ಟು ನಾನು ಅಪಾಯಕಾರಿಯಂತೂ ಅಲ್ಲ. ನಿಮ್ಮ ಸಂದಿಗ್ಧಗಳೂ ನನಗೆ ಅರ್ಥವಾಗುತ್ತವೆ. ನೀವು ವೈಚಾರಿಕ ಪ್ರಜ್ಞೆಯುಳ್ಳ ಒಬ್ಬ ಪ್ರಬುದ್ಧ ಮಹಿಳೆ ಎನ್ನುವುದಕ್ಕಿಂತ, ವ್ಯಕ್ತಿಯೊಬ್ಬರ ಪತ್ನಿ ಎಂಬುದು ಬಹುಮುಖ್ಯ ವಿಷಯ. ಅದು ನಿಮ್ಮನ್ನು ಕಟ್ಟಿ ಹಾಕಿರಬಹುದು. ಇರಲಿ. ಈಗ ನನ್ನಲ್ಲಿ ಬಯಕೆಗಳು ಬತ್ತಿ ಹೋಗಿವೆ. ಸ್ನೇಹ ಸಂಬಂಧದ ಮೌಲ್ಯ ಮತ್ತು ನಿಮ್ಮ ಬೌದ್ಧಿಕ ಎತ್ತರದ ಬಗ್ಗೆ ಮಾತ್ರ ಒಲವು ಉಳಿದಿದೆ. ನೀವು ನನ್ನನ್ನು ಮರೆತುಬಿಟ್ಟಿದ್ದರೆ ಕ್ಷಮಿಸಿ ಬಿಡಿ, ನಾನು ನಿಮ್ಮನ್ನು ಮರೆಯಲು ಸಾಧ್ಯವಿಲ್ಲ' ಹೀಗೆ ಬರೆದು ಅವಳಿಗೆ ಕಳುಹಿಸಿದ.

ಆ ಸಾಲುಗಳಲ್ಲಿದ್ದ ತೀವ್ರತೆಯನ್ನು ಅರಿತ ಮೇದಿನಿ ಕೆಲವೇ ನಿಮಿಷಗಳಲ್ಲಿ ಪ್ರತಿಕ್ರಿಯಿಸಿದಳು. 'ನಿಮ್ಮನ್ನು ಅಪಾಯಕಾರಿ ಎಂದು ಭಾವಿಸುವಷ್ಟು ತಿಳಿಗೇಡಿಯಲ್ಲ ನಾನು. ನಿಮ್ಮನ್ನು ಸಮಾನ ಮನಸ್ಕ, ಸ್ನೇಹಿತನಂತೆ ಭೇಟಿ ಮಾಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಇಂತಹ ಭೇಟಿಗಳು ನಿಮ್ಮಲ್ಲಿ ನಿರೀಕ್ಷೆಗಳನ್ನು ಹೆಚ್ಚಿಸಬಹುದು. ಅಲ್ಲದೇ ನೀವು ಅನ್ಯ ಅರ್ಥಗಳನ್ನೂ ಕಲ್ಪಿಸಿಕೊಳ್ಳಬಹುದು. ಆದ್ದರಿಂದ ಭೇಟಿಯನ್ನು ನಿರಾಕರಿಸಿದೆ. ನಿಮ್ಮ ಎಷ್ಟೋ ಸಂದೇಶಗಳಿಗೂ ಪ್ರತಿಕ್ರಿಯಿಸದೇ ಇರುವುದಕ್ಕೂ ಇದೇ ಕಾರಣ. ಕ್ಷಮಿಸಿ, ಇದು ಅರ್ಹತೆಯ ವಿಷಯವಲ್ಲ' ಎಂದು ತಿಳಿಸಿದ್ದಳು.

'ಸರಿ, ನೀವು ನನ್ನನ್ನು ಸಹಜ–ಸರಳ ಎಂದು ಭಾವಿಸಿದ್ದೀರಿ ಎಂದಾದರೆ ಸಂತೋಷ. ನಿಮ್ಮ ಭೇಟಿ ನನ್ನಲ್ಲಿ ನಿರೀಕ್ಷೆಗಳನ್ನು ಬೆಳೆಸಬಹುದು ಎಂದು ನೀವು ಹೇಳಿದ್ದು ಸತ್ಯ. ಪುರುಷರಲ್ಲಿ ಅಂತಹ ನಿರೀಕ್ಷೆ–ಬಯಕೆಗಳು ಸಹಜವಾಗಿಯೇ ಇರುತ್ತವೆ. ಆದರೆ ಸ್ನೇಹದ ಹೊರತಾಗಿ ಮುಂದುವರಿಯಲು ಇಷ್ಟವಿಲ್ಲ ಎಂದು ನೀವು ಹೇಳಿದ ಮೇಲೆ, ನನಗೆ ಆಸಕ್ತಿಯಿದ್ದರೂ ಮುಂದುವರಿಯಲಾರೆ. ನಿಮ್ಮ ಭೇಟಿಯ ಬಳಿಕ ಕಳೆದ ಈ ಕಾಲದಲ್ಲಿ ನಿಮ್ಮೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂಬ ಪ್ರಬುದ್ಧತೆ ನನ್ನಲ್ಲಿ ಇನ್ನಷ್ಟು ವಿಕಾಸವಾಗಿದೆ ಎಂದು ಭಾವಿಸುವೆ. ಮತ್ತು ನಮ್ಮಿಬ್ಬರ ಒಡನಾಟಕ್ಕೆ ಅನ್ಯ ಅರ್ಥವನ್ನೂ ಕಲ್ಪಿಸಿಕೊಳ್ಳಲಾರೆ. ನಿಮ್ಮ ಬೌದ್ಧಿಕ ಪ್ರೌಢಿಮೆ ನನಗೆ ಪ್ರಮುಖ ಆಕರ್ಷಣೆ, ಅಭಿಮಾನದ ವಿಷಯವಾಗಿದೆ. ಮತ್ತೆ ನಿಮ್ಮನ್ನು ಕಾಣುವ ಅವಕಾಶ ಕೊಡುತ್ತೀರಿ ಎಂದಾದರೆ ನನಗೆ ಅದಕ್ಕಿಂತ ಆನಂದದ ವಿಷಯವಿಲ್ಲ. ಬೆಂಗಳೂರಿಗೆ ಬಂದಾಗ ಖಂಡಿತ ಫೋನ್ ಮಾಡುತ್ತೇನೆ. ಮತ್ತೊಮ್ಮೆ ಸಂಧಿಸೋಣ, ಚರ್ಚಿಸೋಣ.'

ಹೀಗೆ ಬರೆದು ಅವಳಿಗೆ ಪೋಸ್ಟ್ ಮಾಡಿದ. ಅವಳು ಅದಕ್ಕೆ ಪ್ರತ್ಯುತ್ತರವಾಗಿ ಮುಗುಳ್ನಗುವಿನ ಎಮೋಜಿ ಹಾಕಿದಳು. ಅದು ಅವನಲ್ಲಿ ಆತ್ಮವಿಶ್ವಾಸ, ಮುಖದ ಮೇಲೆ ಮುಗುಳ್ನಗುವನ್ನು ಮೂಡಿಸಿತು.

★★★